ಮೂ. ದಾ. ನಂ. 68/14

ಪಿ.ಡಬ್ಲ್ಯು.1

(ಇಂದು ದಿನಾಂಕ 31-10-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ಪ್ರತಿವಾದಿಯರ ಪರ ಶ್ರೀ ವೈ.ವಿ.ಎಸ್. ವಕೀಲರಿಂದ–**

1 ನೇ ವಾದಿ ನನ್ನ ತಾಯಿ. 2 ನೇ ವಾದಿಯ ತಾಯಿ 1 ನೇ ವಾದಿಯ ಅಕ್ಕ. ಸನ್ 1947 ರಲ್ಲಿ 2 ನೇ ವಾದಿಯ ತಾಯಿ ಜನಿಸಿರುತ್ತಾರೆ. ನಾನು ಹುಟ್ಟುವ 5 ವರ್ಷಗಳ ಮೊದಲು ಅಂದರೆ 1983 ರಲ್ಲಿ 2 ನೇ ವಾದಿಯ ತಾಯಿ ತೀರಿಕೊಂಡಿರುತ್ತಾರೆ. 2 ನೇ ವಾದಿಯ ತಾಯಿ ತೀರಿಕೊಂಡ ನಂತರ ಅವರ ಗಂಡ ತೀರಿಕೊಂಡಿರುತ್ತಾರೆ. ಮೃತ 1 ನೇ ವಾದಿಯು 2 ನೇ ವಾದಿಯ ರಕ್ಷಕ(Guardian) ರಾಗಿದ್ದು, ಅವರ ನಂತರ ನಾನು 2 ನೇ ವಾದಿಯ ರಕ್ಷಕ ಎಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ನ್ಯಾಯಾಲಯದಿಂದ ನಿರ್ಣಯ ಆಗಿರುವುದಿಲ್ಲ. 1 ನೇ ವಾದಿ 1950 ರಲ್ಲಿ ಜನಿಸಿರುತ್ತಾರೆ. ನಾನು 1987 ರಲ್ಲಿ ಜನಿಸಿರುತ್ತೇನೆ. ನಾನು ಹುಟ್ಟುವ 3 - 4 ವರ್ಷಗಳ ಮೊದಲು 1 ನೇ ವಾದಿಯ ಮದುವೆಯಾಗಿರುತ್ತದೆ. 1 ನೇ ವಾದಿಯು ಸಿಂಡಿಕೇಟ್ ಬ್ಯಾಂಕ್‌ನ ಉದ್ಯೋಗಿಯಾಗಿದ್ದರು. ನನ್ನ ತಂದೆಯ ಹೆಸರು ಜಯಂತ್ ಪ್ರಭು. 1 ನೇ ವಾದಿ 2010 ರಲ್ಲಿ ನೌಕರಿಯಿಂದ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆ 2006 ರಲ್ಲಿ ತೀರಿಕೊಂಡಿರುತ್ತಾರೆ.

1 ನೇ ವಾದಿ ಹಾಗೂ 2 ನೇ ವಾದಿಯ ತಾಯಿ ಇವರ ಮದುವೆ ಯಾವಾಗ ಆಗಿತ್ತು ಎಂದು ಗೊತ್ತಿಲ್ಲ. 1 ನೇ ವಾದಿ ಹಾಗೂ 2 ನೇ ವಾದಿಯ ತಾಯಿ ಇವರ ಮದುವೆ 1974 ರ ಪೂರ್ವದಲ್ಲಿಯೇ ಆಗಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. 1 ನೇ ವಾದಿಯು ಬೆಂಗಳೂರಿನಲ್ಲಿ ಸ್ವಂತ ಮನೆ ಕಟ್ಟಿಕೊಂಡು ವಾಸವಾಗಿದ್ದರು ಎಂದರೆ ಮನೆ ಕಟ್ಟಿರುತ್ತಾರೆ, ಆದರೆ ವಾಸವಾಗಿರಲಿಲ್ಲ. 1 ನೇ ವಾದಿಯು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುವಾಗ ಸ್ವಂತ ಮನೆ ಕಟ್ಟಿ, ವಾಸ ಮಾಡಿಕೊಂಡು ಬಂದಿದ್ದು, ನಂತರ ಆ ಮನೆಯು ನನ್ನ ತಾಬಾ ಬಂದಿರುತ್ತದೆ ಎಂದರೆ ಸರಿಯಲ್ಲ.

1 ನೇ ವಾದಿಯ ನಿವೃತ್ತಿ ನಂತರ ನಿವೃತ್ತಿ ವೇತನ ಬರುತ್ತಿತ್ತು ಎಂದರೆ ಸರಿ. 2 ನೇ ವಾದಿಯ ತಾಯಿ ತೀರಿಕೊಂಡಾಗ 1 ನೇ ವಾದಿಗೆ ಮಕ್ಕಳು ಇರಲಿಲ್ಲ. 1 ನೇ ವಾದಿಯು 2 ನೇ ವಾದಿಯ ತಂದೆಯ ಬಳಿ ತನಗೆ ಮಕ್ಕಳು ಇಲ್ಲ, ನಾನು 2 ನೇ ವಾದಿಯನ್ನು ಸಾಕುತ್ತೇನೆ ಎಂದು ಕೇಳಿಕೊಂಡ ಮೇರೆಗೆ 2 ನೇ ವಾದಿಯನ್ನು 1 ನೇ ವಾದಿಗೆ ಸಾಕಲು ನೀಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿಯನ್ನು ಸಾಕಲು ಯಾರೂ ಬರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿಗೆ ವಾಸ್ತವ್ಯದ ಮನೆ ಇರಲಿಲ್ಲ, ಬಾಡಿಗೆ ಮನೆಯಲ್ಲಿ ವಾಸಮಾಡಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ವಾದಿಯು, 2 ನೇ ವಾದಿಯನ್ನು ಸಾಕಲು ತೆಗೆದುಕೊಂಡ 5 ವರ್ಷಗಳ ನಂತರ ನಾನು ಹುಟ್ಟಿರುತ್ತೇನೆ. 2 ನೇ ವಾದಿಯು ಬುದ್ಧಿಹೀನಳಲ್ಲ ಎಂದರೆ ಸರಿಯಲ್ಲ. 2 ನೇ ವಾದಿಯ ಹಕ್ಕನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಯು ತನ್ನ ಹಿತಾಸಕ್ತಿಯನ್ನು ಕಾಪಾಡಲು ಸಮರ್ಥರಾಗಿರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಎಕ್ಸಟೆನ್ಚರ್ ಕಂಪನಿಯಲ್ಲಿ software engineer ಆಗಿರುತ್ತೇನೆ. ನನ್ನ ಗಂಡ ಬೆಂಗಳೂರಿನ security engineer ಆಗಿ ಕೆಲಸ ಮಾಡುತ್ತಿದ್ದಾರೆ. ನನ್ನ ಗಂಡನಿಗೆ ಬೆಂಗಳೂರಿನಲ್ಲಿ ಜಂಟಿ ಆಸ್ತಿ ಇದೆ. ನನಗೆ ಸ್ವತಂತ್ರವಾಗಿ ಪ್ಲಾಟ್ ಖರೀದಿ ಮಾಡುವ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ. 2 ನೇ ವಾದಿಯ ತಾಯಿ ಗೃಹಿಣಿಯಾಗಿದ್ದರು. 1 ನೇ ಪ್ರತಿವಾದಿ 2 ನೇ ವಾದಿಯ ತಾಯಿಗಿಂತ ಕಿರಿಯವರು ಮತ್ತು 1 ನೇ ವಾದಿಗಿಂತ ಹಿರಿಯವರಾಗಿರುತ್ತಾರೆ.

1 ನೇ ಪ್ರತಿವಾದಿ 1980 ರಿಂದ ಶಿರಸಿಯಲ್ಲೇ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ. ದಾವಾ ಸ್ವತ್ತಿನ ಬಾಬ್ತು 1 ರಲ್ಲಿ 2 ನೇ ಪ್ರತಿವಾದಿಯವರು ಮೊದಲಿನಿಂದಲೂ ವಾಸ್ತವ್ಯ ಮಾಡಿಕೊಂಡು

ಬಂದಿರುತ್ತಾರೆ ಎಂದರೆ 2 ನೇ ಪ್ರತಿವಾದಿ, ಅವರ ತಾಯಿ ಮತ್ತು ನನ್ನ ಅಜ್ಜಿ ಒಟ್ಟಾಗಿ ವಾಸಮಾಡಿಕೊಂಡು ಬಂದಿರುತ್ತಾರೆ. 1 ನೇ ವಾದಿ 2 ನೇ ವಾದಿಯ ತಾಯಿ ಮತ್ತು 1 ನೇ ಪ್ರತಿವಾದಿ ದಾವಾ ಸ್ವತ್ತಿನ ಬಾಬ್ತು 1 ರಲ್ಲಿ ವಾಸ ಮಾಡಿಕೊಂಡು ಬಂದಿರಲಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯು ಎಲ್ಲಾ ಮಕ್ಕಳಿಗಿಂತ ಕಿರಿಯವರು ಎಂದರೆ ಸರಿ. ಮದುವೆಯ ಮುಂಚೆ 3 ನೇ ಪ್ರತಿವಾದಿಯು ದಾವಾ ಸ್ವತ್ತಿನ ಬಾಬ್ತು 1 ರಲ್ಲಿ ವಾಸವಾಗಿದ್ದರು.

3 ನೇ ಪ್ರತಿವಾದಿಯ ಮದುವೆಯನ್ನು 2 ನೇ ಪ್ರತಿವಾದಿಯು ತನ್ನ ಸ್ವಂತ ಖರ್ಚಿನಿಂದ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ವಾದಿಯೂ ಸಹ ಖರ್ಚು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಮದುವೆಗೆ 1 ನೇ ವಾದಿಯು ಖರ್ಚು ಮಾಡಿರುವ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. 3 ನೇ ಪ್ರತಿವಾದಿಯ ಮದುವೆಗೆ 1 ನೇ ವಾದಿಯು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ

ಮೂ. ದಾ. ನಂ. 68/14

ಪಿ.ಡಬ್ಲ್ಯು 1